**<u>ದಿನಾಂಕ: 24.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರಿದ ಪಾಟೀಸವಾಲು: ವಾದಿ ಪರ ಶ್ರೀ ಎ ಜಿ ವಕೀಲರಿಂದ:</u>**

ಆ ದಿನ ಗಲಾಟೆ ವಿಚಾರ ಸ್ಥಳೀಯ ಮಾಧ್ಯಮಗಳಲ್ಲಿ ಪ್ರಸಾರ ಆಗಿರುತ್ತದೆ ಎಂದರೆ ಆ ರೀತಿಯ ಗಲಾಟೆ ಆಗಿರುವುದಿಲ್ಲ, ಸ್ಥಳೀಯ ಮಾಧ್ಯಮದಲ್ಲಿ ಪ್ರಚಾರ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ತಾಯಿ 7 ನೇ ತರಗತಿವರೆಗೂ ಓದಿರುತ್ತಾರೆ ಎಂದು ನನ್ನ ಬಳಿ ಹೇಳಿರುತ್ತಾರೆ. ನನ್ನ ತಾಯಿಗೆ ಕನ್ನಡ ಓದಲು ಬರೆಯಲು ಬರುತ್ತದೆ . ಈಗ ನನಗೆ ತೋರಿಸುವಂತಹ ದಾನಪತ್ರದಲ್ಲಿ ನನ್ನ ತಾಯಿಯ ಸಹಿ ಅಪೂರ್ಣವಾಗಿರುತ್ತದೆ ಎಂದರೆ ನನಗೆ ಆದರ ಬಗ್ಗೆ ಗೊತ್ತಿಲ್ಲ. ಸ್ಕ್ಯಾನಿಂಗ್ ಮಾಡುವ ಸಮಯದಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪೂರ್ಣವಾದಂತಹ ದಾನಪತ್ರವನ್ನು ನೋಂದಾಣಾಧಿಕಾರಿಗಳ ಜೊತೆ ಶಾಮೀಲಾಗಿ ನನ್ನ ತಾಯಿಯವರು ಮೃತರಾಗಿದ್ದರು ಸಹ ಅದನ್ನು ನೋಂದಣಿ ಮಾಡಿಸಿಕೊಂಡು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಉಳಿದ ಸಹಿಗಳನ್ನು ನನ್ನ ತಾಯಿಯವರು ಮೃತ ಪಟ್ಟ ಮೇಲೆ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಸಂಜೆ 5 ವರೆಗೆ 25 ನೇ ತಾರೀಖು ನಮ್ಮ ಮನೆಯಲ್ಲಿ ಮೃತಪಟ್ಟಿರುತ್ತಾರೆ. ದಾನಪತ್ರ ಅದೇ ದಿನ 4 ಗಂಟೆಗೆ ಪೂರ್ಣ ಗೊಂಡಿರುತ್ತದೆ. ನಮ್ಮ ತಾಯಿಯವರು ಮರಣ ಹೊಂದಿದ ನಂತರದಲ್ಲಿ ಛಾಯ ಚಿತ್ರ ತೆಗೆಸಿಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಯ ಸಹಿ ಎಂದು ರುಜುವಾತು ಪಡಿಸಲು ಬೆರಳುತಜ್ಞರಿಗೆ ಕಳುಹಿಸಲು ತೂಂದರೆ ಇರುವುದಿಲ್ಲ. ನನ್ನ ತಾಯಿಯವರ ಸಹಿ ಮಾಡಿದಂತಹ ಇತರೆ ದಾಖಲಾತಿಗಳನ್ನು ಹೋಲೀಕೆ ಮಾಡಲು ತಜ್ಞರಿಗೆ ಕಳುಹಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ತಾಯಿಯವರು ಪ್ರಜ್ಞಾಹೀನರಾಗಿದ್ದರು ಎಂದರೆ ಸರಿಯಲ್ಲ. ಪ್ರವೀಣ್, ಕುಮಾರಿ,

ಪೂರ್ಣಿಮಾ ಇವರೆಲ್ಲರೂ ಮತ್ತು ಯೊಗೇಶ ಹಾಗೂ ನಾನು ನಮ್ಮ ತಾಯಿಯನ್ನು ಕರೆದುಕೊಂಡು ನೋಂದಣಾಧಿಕಾರಿ ಕಛೇರಿಗೆ ಹೋಗಿರುತ್ತೇವೆ. ಅವರನ್ನು ಸಾಕ್ಷಿ ವಿಚಾರಣೆಗೆ ಕರೆಸಲು ನನ್ನದೇನೂ ತೊಂದರೆ ಇರುವುದಿಲ್ಲ. ನನ್ನ ಪತಿಯವರನ್ನು ಸಾಕ್ಷಿ ವಿಚಾರಣೆಗೆ ಕರಿಸಿದರೆ ನನಗೇನೂ ತೊಂದರೆ ಇಲ್ಲ. ದಾವಾ ಸ್ವತ್ತಿನ ಅಬಿವೃದ್ದಿಗಾಗಿ ಎಲ್ಲಾ ಮಕ್ಕಳು ಶ್ರಮ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 50-60 ತೆಂಗಿನ ಮರಗಳು ಇರುತ್ತವೆ . ನನಗೆ ಇತರೆ ಸಹೋದರಿಯರನ್ನು ಸಲುಹುತ್ತೇನೆ ಎಂದು ದಾವಾ ಸ್ವತ್ತಿನ ಆದಾಯವನ್ನು ಎಲ್ಲಾ ನನಗೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ವಂಚನೆ ಕೇಸಿನಡಿಯಲ್ಲಿ ನನ್ನ ಪತಿಯವರು ಕೆಲವು ದಿನಗಳ ನ್ಯಾಯಾಂಗ ಬಂಧನದಲ್ಲಿ ಇದ್ದರೆಂದರೆ ನನಗೆ ಗೊತ್ತಿಲ್ಲ. 18.04.2012 ನನ್ನ ಪತಿ ನನ್ನ ಜೊತೆಗೆ ಇದ್ದರು. ಆದರೆ ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ. ನನ್ನ ಪತಿಯವರು ನ್ಯಾಯಾಂಗ ಬಂದನಲ್ಲಿ ಎಷ್ಟು ದಿನ ಇದ್ದರು ಎಂರದೆ ಆ ವಿಚಾರವೇ ನನಗೆ ಗೊತ್ತಿಲ್ಲ. ನನಗೆ ನನ್ನ ಪತಿಯವರು ನ್ಯಾಯಾಂಗ ಬಂದನದಲ್ಲಿದ್ದ ಬಗ್ಗೆ ನನಗೆ ನೋಟೀಸ್ ನೀಡುತ್ತಾರೆ ಎಂದರೆ ನನಗೆ ಯಾವುದೇ ನೋಟೀಸ್ ಬಂದಿಲ್ಲ ಎಂದು ಹೇಳುತ್ತಾರೆ. ಆ ಸಂದರ್ಬದಲ್ಲಿ ನನ್ನ ಪತಿಯವರು ಜಾಮೀನು ಅರ್ಜಿ ಸಲ್ಲಿಸಲು ವಕೀಲರನ್ನು ನೇಮಿಸಿ ಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಾಮೀನು ಅರ್ಜಿಯಲ್ಲಿ 1200 ತೆಂಗಿನ ಮರಗಳು ಇರುತ್ತವೆ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳು ಹೇಳುತಿತದ್ದೇನೆ ಆ ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ತೆಂಗಿನ ಮರದ ಆದಾಯಗಳನ್ನು ನಾನೇ ಅನುಭವಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಿಂದಬ ಂದಆದಾಯದಿಂದ ದಾವಾ ಶೆಡ್ಯೂಲ್ ಸ್ವತ್ತಿನ 7 ರಿಂದ 9 ಐಟಂ ಗಳನ್ನು ಖರೀದಿ

ಮಾಡಿದ್ದೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದರ ಬಗ್ಗೆ ನನ್ನ ಪತಿಯವರನ್ನು ಕರೆಸಿ ವಿಚಾರಣೆ ನನಗೇನು ತೊಂದರೆ ಇರುವುದಿಲ್ಲ ಎಂದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ನಾನು ಮತ್ತು ನನ್ನ ಪತಿಂನುವರು ಸಂಪಾದಿಸಿದ ಹಣದಿಂದ ದಾವಾ ಶಡ್ಯೂಲ್ 7 ರಿಂದ 9 ಐಟಂ ಗಳನ್ನು ಖರಿದಿ ಮಾಡಿದ್ದೇನೆ ಎಂದು ಹೇಳಿದ್ದು ಆದ್ದರಿಂದ ನನ್ನ ಪತಿಯವರನ್ನು ಕರೆಸಿ ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಅವರದು ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿಯವರು ನೋಂದಣಾಧಿಕಾರಿಯಲ್ಲಿ ಮೃತ ಪಟ್ಟಿದ್ದರಿಂದ ಗಲಾಟೆ ಆಗಿ ವಾದಿ ದೂರು ಕೊಡಲು ಠಾಣೆಗೆ ಹೋಗಲು ಸಿದ್ದರಾಗಿದ್ದರು ಎಂದರೆ ಸರಿಯಲ್ಲ. ಆಗ ನಾನು ಪಂಚಾಯಿತಿ ಸೇರಿಸೋಣ ದೂರು ಕೊಡುವುದು ಬೇಡ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಂಚಾಯಿತಿಗೆ ಊರಿನ ಮುಖಂಡರೆಲ್ಲಾ ಸೇರಿದ್ದರು ಎಂದರೆ ಸರಿಯಲ್ಲ. ಪಿತಾರ್ಜಿತ ಆಸ್ತಿಯಲ್ಲಿ ಹಿಸ್ಸೆಯನ್ನು ಕೇಳುವಾಗ ಪಂಚಾಯಿತಿ ಮಾಡಿಸಲಾಗಿರುತ್ತದೆ . ಪಂಚಾಯಿತಿಯಲ್ಲಿ ಎಲ್ಲರೂ ಸಮಪಾಲು ಒಪ್ಪಿಕೊಳ್ಳಿ ಎಂದು ಸಲಹೆ ನೀಡಿದ್ದರು ಅದನ್ನು ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡು ನಾನು ಮತ್ತು ನನ್ನ ಸಹೋದರಿಯರು ಅನುಬೋಗದಲ್ಲಿರುತ್ತೇವೆ ಎಂದರೆ ಸರಿಯಲ್ಲ. 2 ಎಕರೆ 5 ಗುಂಟೆಯಲ್ಲಿ ನಾನು ಇರುತ್ತೇನೆ . 1 ನೇ ಪ್ರತಿವಾದಿ 215/3 ರಲ್ಲಿ 1 ಎಕರೆ 3 ಗುಂಟೆ, 127/6 ಬಿ ರಲ್ಲಿ 15 ಗುಂಟೆ ಅನುಭೋಗದಲ್ಲಿರುತ್ತಾರೆ. ಪಂಚಾಯಿತಿಯಲ್ಲಿ ವಾದಿಗೆ ಹಿಸ್ಸೆ ಹಕ್ಕನ್ನು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ವಿಬಾಗಪತ್ರವನ್ನು ಬರವಣಿಗೆ ಮೂಲಕ ಮಾಡಿಕೊಳ್ಳುವ ಎಂದು ಹೇಳುತ್ತಾ ಬಂದಿದ್ದು

ನಾನು ಮುಂದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಕೂನೆಗೆ ನಾನು ದಾವಾ ಶೆಡ್ಯೂಲ್ ನಲ್ಲಿ ನನ್ನ ಹಸರಿಗೆ ಮಾಡಿಸಿಕೊಂಡಿದ್ದರಿಂದ ಅವರಿಗೆ ಯಾವುದೇ ವಿಭಾಗ ಕೊಡುವುದಿಲ್ಲ ಎಂದು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ಊರಿನಲ್ಲಿ ಒಂದು ಬಾರಿ ಪಂಚಾಯಿತಿ ಆಗಿರುತ್ತದೆ. ನಮ್ಮ ಗ್ರಾಮದಲ್ಲಿ ಪಂಚಾಯಿತಿಯಲ್ಲಿ ಮಾಡಲಾಗಿರುತ್ತದೆ ಹಿರಿಯಣ್ಣ ಮಾತ್ರ ಸೇರಿರುತ್ತಾರೆ ಅದು ಸುಮಾರು 12-13 ವರ್ಷದ ಹಿಂದೆ ಆಗಿರುತ್ತದೆ . ಹಿರಿಯಣ್ಣ ನನ್ನ ಸೋದರ ಮಾವ. ನಾನು ಹುಟ್ಟಿದಾಗಿನಿಂದ ಮದುವೆಯಾಗುವ ತನಕ ಕುಂಬೇನಹಳ್ಳಿ ಯಲ್ಲಿ ವಾಸವಾಗಿದ್ದೆ ಎಂದರೆ ಸರಿ. ಮದುವೆ ಆದನಂತರವೂ ಸಹ ಕುಂಬೇನಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದು ಹೇಳುತ್ತಾರೆ. ನನ್ನ ವಾಸ ಸ್ಥಳ ಬೆಂಗಳೂರಿನ ವಿಳಾಸ ಇರುತ್ತದೆ ಎಂದರೆ ಸರಿಯಲ್ಲ. ಹಿರಿಯಣ್ಣ ರವರ ನ್ನು ನ್ಯಾಯಾಲಯಕ್ಕೆ ಕರೆಸಿ ವಿಚಾರಣೆ ಮಾಡಲು ನನಗೇನೂ ತೊಂದರೆ ಇಲ್ಲ ಎಂದರೆ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ಈ ಕೇಸಿನ ವಿದ್ಯಾಮಾನ ಗೊತ್ತಿದ್ದರಿಂದ ಅವರನ್ನು ಸಾಕ್ಷ್ಯ ಮಾಡಿಸಲು ಅವಶ್ಯಕತೆ ಇರುತ್ತದೆ ಎಂದರೆ ಸರಿಯಲ್ಲ. ನಾನ ನಿರಾಕರಿಸಿದ ನಂತರ ವಾದಿಗಳು ದಾಖಲಾತಿಗಳು ನೋಡಿದಾಗ ಖಾತೆ ನನ್ನ ಹಸರಿಗೆ ಆದ ಬಗ್ಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ಹೇಳಿದಂತಹ ಮಾತನ್ನು ದಿಕ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ನೋಂದಣಿ ಅದಿಕಾರಿಗಳೊಂದಿಗೆ ಶಾಮೀಲಾಗಿ ಅಪೂರ್ಣವಾದ ಪತ್ರವನ್ನು ನನ್ನ ಹೆಸರಿಗೆ ಖಾತೆಯನ್ನು ವಾದಿಗೆ ತಿಳಿಯದಂತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯಲ್ಲಿ ಹೇಳಿದ ಮಾತನ್ನು ದಿಕ್ಕರಿಸಿದ್ದರಿಂದ ಪಂಚಾಯಿತಿದಾರರು ಸಾಕ್ಷ್ಯವನ್ನು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-46 ವತ್ತು 47 ರಲ್ಲಿ ಒಕ್ಕಣೆ ಒಂದೇ ರೀತಿ ಇರುತ್ತದೆ ಎಂದರೆ ಸರಿಯಲ್ಲ. ಎರಡು

ದಾಖಲಾತಿಗಳು ಬೇರೆ ಬೇರೆ ಶಾಯಿಯಲ್ಲಿರುತ್ತವೆ. ಮುಖ್ಯಸ್ಥರು ಪರಿಚಯಸ್ಥರು ಆದ ಕಾರಣ ನಾನು ಹೇಳಿದಂತೆ ಒಕ್ಕಣೆ ಮಾಡಿಕೊಂಡು ದಾಖಲೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯವರು ಇರುವಾಗಲೇ ನನ್ನನ್ನು ಮದುವೆ ಮಾಡಿಸುವಾಗ ನನ್ನಭಾಗಕ್ಕೆ ಬರುವಂತಹ ಆಸ್ತಿಯನ್ನು ಮಾರಾಟ ಮಾಡಿ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ಮೇಲೆ ಆಸ್ತಿಯನ್ನು ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಅದು ಮಾರಾಟ ಮಾಡಿದ ನಂತರವೇ ನನ್ನ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿ . ಆದ್ದರಿಂದ ಉಳಿದ ಆಸ್ತಿಗಳು ನನ್ನ ಇತರೆ ಸಹೋದರಿಯರಿಗೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾನಪತ್ರ ಮಾಡಲು ನನ್ನ ತಾಯಿಯವರಿಗೆ ಇಷ್ಟ ಇರಲಿಲ್ಲ ಬಲವಂತದಿಂದ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. 7 ರಿಂದ 9 ಐಟಂಗಳು ಒಟ್ಟು ಆದಾಯದಿಂದ ಬಂದಂತಹ ಕ್ರಯಮಾಡಿದ ಸ್ವತ್ತುಗಳು ಎಂದರೆ ಸರಿಯಲ್ಲ. ಅದನ್ನು ಸಹೋದರಿಯರಿಗೆ ಭಾಗ ಕೊಡಬೇಕೆಂದು ನನ್ನ ತಾಯಿಯವರು ಬದುಕಿದ್ದಾಗಲೇ ಹೇಳಿದ್ದರು ಎಂದರೆ ಸರಿಯಲ್ಲ. 9 ನೇ ಐಟಂ ನ್ನು ಸುಬ್ಬೇಗೌಡರಿಂದ ಕ್ರಯಕ್ಕೆ ಪಡೆದುಕೊಂಡಿದ್ದು ಎಂದರೆ ಸರಿ . ಆ ಸುಬ್ಬೇಗೌಡರು ನನ್ನ ತಂದೆಯ ಅಣ್ಣ ಎಂದರೆ ಸರಿ. 9 ನೇ ಐಟಂ ನ್ನು ಖರೀದಿ ಮಾಡುವಾಗ ನನ್ನ ತಂದೆ ಬದುಕಿರಲಿಲ್ಲ ಎಂದರೆ ಸರಿ. ಸುಬ್ಬೇಗೌಡರು ನನ್ನ ತಾಯಿಯ ಭಾವನಾದ ಕಾರಣ ನಾನುಇನ್ನಿತರ ಸಹೊಇದರಿಯರಿಗೆ ಮೋಸ ಮಾಡುವುದಿಲ್ಲ ಎಂದು ನನ್ನ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು ನನ್ನ ಸಹೋದಯರಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಒಬ್ಬಳೇ

ಲಪಾಟಿಸಬೇಕೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಜೊತೆ ಬೆಂಗಳೂರಿನಲ್ಲಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ ದಾನಪತ್ರ ಆಗುವ ವಿಚಾರ ವಾದಿಗೆ ಗೊತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ